ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).— ಮಸ್ಕಿನಾಲಾ ನೀರಾವರಿ ಯೋಜನೆಯ ನಿರ್ಮಾಣದ ಕೆಲಸ 1976ರಲ್ಲಿ ಪ್ರಾರಂಭವಾಯಿತು. ಕಟ್ಟೆಯು ನಿರ್ಮಾಣ ಹಂತದಲ್ಲಿದ್ದು ನಾಲೆಯ ಕೆಲಸವನ್ನು ಇನ್ನೂ ಪ್ರಾರಂಭಿಸಿಲ್ಲ. ಹಣದ ಸೌಲಭ್ಯತೆಯನ್ನನುಸರಿಸಿ ಈ ಯೋಜನೆಯ ಕೆಲಸವನ್ನು 1990ರಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.

ವಿಷಯ : ಕಡಕಲ ಮತ್ತು ಉಟಗನೂರು ಗ್ರಾಮಗಳ ಹತ್ತಿರ ಏತ ನೀರಾವರಿ ಯೋಜನೆ ಪ್ರಾರಂಭಿಸುವುದು.

ಪ್ರಶ್ನೆ : 199 (711) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಲಿಂಗಸೂಗೂರು).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

1) ಮಾಸ್ಕಿ ತಾಲ್ಲೂಕಿನ ತಡಕಲ್ ಮತ್ತು ಉಟಗನೂರು ಗ್ರಾಮಗಳ ಹತ್ತಿರ ಇರುವ ಹಳ್ಳಕ್ಕೆ ಹಾದು ಹೋಗುವ ಅನುಪಯುಕ್ತ ನೀರಿಗೆ ಒಡ್ಡನ್ನು ನಿರ್ಮಿಸಲು ಅಥವಾ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಲು ಸರಕಾರದವರು ಯೋಜಿಸಿದ್ದಾರೆಯೇ?

ಉತ್ತರ : ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

1) ಪರಿಶೀಲನೆಯಲ್ಲಿದೆ.

ವಿಷಯ : ಚಿತಾಪುರ ತಾಲ್ಲೂಕಿನ ಲಾಡ್ಲಾಪುರ ಗ್ರಾಮಕ್ಕೆ ಬನ್ನೆಪಾಕೆರೆಯನ್ನು ಕಟ್ಟಿಸುವುದು.

ಪ್ರಶ್ನೆ : 200(518) ಶ್ರೀ ಕೆ.ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗುಲ್ಬರ್ಗಾ ಜಿಲ್ಲೆಯ ಚಿತಾಪುರ ತಾಲ್ಲೂಕಿನ ಲಾಡ್ಲಾಪುರ ಗ್ರಾಮಕ್ಕಾಗಿ ಬನ್ನೆಪಾಕೆರೆಯನ್ನು ಕಟ್ಟಿಸಿ ಕೊಡಬೇಕೆಂದಿದ್ದುದು ಸರ್ಕಾರದವರ ಗಮನದಲ್ಲಿದೆಯೇ ;

ಆ) ಹಾಗಿದ್ದಲ್ಲಿ, ಈ ವರ್ಷದ ಆಯವ್ಯಯದಲ್ಲಿ ಅದಕ್ಕಾಗಿ ಎಷ್ಟು ಹಣವನ್ನು ಕಾದಿರಿಸಲಾಗಿದೆ;

ಇ) ಈ ಕೆಲಸವನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು;

ಈ) ವಿಳಂಬಕ್ಕೆ ಕಾರಣಗಳೇನು?

ಉತ್ತರ : ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).— ಅ) ಇದೆ.

ಆ) ಈ ವರ್ಷದ ಆಯವ್ಯಯದ ಪಟ್ಟಿಯಲ್ಲಿ ಸೇರಿಲ್ಲದಿರುವುದರಿಂದ ಹಣವನ್ನು ಕಾದಿರಿಸಲಾಗಿದೆ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

Sub : Lift Irrigation Scheme, Mangur village, Taluk Chikodi, Dist : Belgaum.

Question : 201(505) Sri A.A. Nimbalker (Sadalaga).— Will the Minister of State for Minor Irrigation be pleased to state that :—

a) Whether the District Development Council, Belgaum has sent a proposal to the Government for taking over and compeleting the II stage of the Lift Irrigation Scheme at Mangur village, Chikodi Taluk, Belgaum District ;

b) If so, the action taken by the Government in this regard?

Answer : Sri R. N. Lakshmipathy (Minister of State for Minor Irrigation).— a) Yes. b) Will be considered.

Sub : Re-Carpeting of Chikodi — Examba Road.

Question : 203 (576) Sri A.A. Nimbalker(Sadalag).— Will the Minister for Public Works and Irrigation be pleased to state that :—

a) Whether there is proposal for the re-carpeting of the Chikodi-Examba Road ;

b) If so the action taken by the Government in this regard?

Answer : Sri H.D. Devegowda (Minister for Public Works and Irrigation).— a) Out of the total length of 11.00kms. of this road it is proposed to re-carpet only the bad reaches of the road from km 0.0 to 6 0 kms.

b) An estimate amounting to Rs. 5,00 lakhs has been sanction for chip carpetting in the reach from km 0.0 to 6.00 kms. The work will be started early after fixing up the agency.

Sub : Compensation payment for the land acquired for construction of G L.B.C. in Raibagh and Chikodi

Question : 202 (575) Sri A A. Nimbalker (Sadalaga).— Will the Minister for Public Works and Irrigation be pleased to state that :—

a) Whether the Government has paid the compensation for the lands acquired for the purpose of constructing the G.L.B.C. and its Distributories ;

b) Whether the full length of the G.L.BC. as planned is completed or not;

c) The total area of land acquired for the purpose of constructing G.L.B.C. in Raibagh and Chikodi Taluks?

Answer : Sri H. D. Devegowda (The Minister for Public Works and Irrigation).— a) Compensation is being paid;

b) Completed. Only the lining work is being taken up.

c) Raibagh Taluka – 388 acres; Chikodi Taluka – 461 acres.

ಶ್ರೀ ಆರ್.ಎನ್. ನಾಯಕ್.— ಅಧ್ಯಕ್ಷರೇ, ಒಂದೆರಡು ಪ್ರಶ್ನೆ ಇದೆ.

ಅಧ್ಯಕ್ಷರು.—ಕೊಶ್ಚನ್ ಹವರ್ ಮುಗಿದು ಹೋಯಿತು, Presentation of Petitions.

ಶ್ರೀ ಆರ್.ಎನ್. ನಾಯಕ್.— ಅಧ್ಯಕ್ಷರೇ, ಕೆಲವು ಪ್ರಶ್ನೆಗಳಿಗೆ ಸಮಯ ಜಾಸ್ತಿ ತೆಗೆದುಕೊಳ್ಳುತ್ತೀರಿ, ಕೆಲವು ಪ್ರಶ್ನೆಗಳಿಗೆ ಕಡಿಮೆ ಸಮಯ ತೆಗೆದುಕೊಳ್ಳುತ್ತೀರಿ. ಇದರಿಂದ ಬಹಳ ಮುಖ್ಯವಾದಂಥ ಪ್ರಶ್ನೆಗಳಿಗೆ ತೊಂದರೆಯಾಗುತ್ತಿದೆ. ಆದುದರಿಂದ ಪ್ರತಿಯೊಂದು ಪ್ರಶ್ನೆಗೂ ಇಂತಿಷ್ಟು ವೇಳೆ ಎಂದು ಹಂಚಿಬಿಡಿ.

ಅಧ್ಯಕ್ಷರು.— ಆ ರೀತಿ ಆಗುವುದಿಲ್ಲ. ಜನರಲ್ ಕೊಶ್ಚನ್ಸ್ ಜಾಸ್ತಿ ಇದ್ದರೆ ಕಾಲಾವಕಾಶ ಜಾಸ್ತಿ ಆಗುತ್ತದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಕೊನೇ ಪ್ರಶ್ನೆ, ಮಾನ್ಯ ಶಾಣಪ್ಪನವರದ್ದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ, ಅವರ ಪರವಾಗಿ ಕೇಳಲಿಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು.— ಶಾಣಪ್ಪನವರೇ ಬಂದಿಲ್ಲ, ಅವರ ಪರವಾಗಿ ನೀವು ಯಾಕೆ ವಾದ ಮಾಡುತ್ತೀರಿ?

ಶ್ರೀ ಪಂಪಾಪತಿ.— ಇದು ಹಣಕಾಸಿನ ಪ್ರಶ್ನೆ, ಬಹಳ ಮುಖ್ಯವಾದುದು. ಆದುದರಿಂದ ಮಾನ್ಯ ಶಾಣಪ್ಪನವರ ಪರವಾಗಿ ಕೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.— ಆ ರೀತಿ ಆಗುವುದಿಲ್ಲ.

4. Presentation of Petition

ಶ್ರೀ ಹೆಚ್.ಬಿ. ಚೆಲುವಯ್ಯ.— ಮಾನ್ಯ ಅಧ್ಯಕ್ಷರೇ, ಸಂಬಳ ಹಾಗೂ ವಿಶ್ರಾಂತಿ ವೇತನದ ಸೌಲಭ್ಯಗಳಲ್ಲಿರುವ ತಾರತಮ್ಯದ ಬಗ್ಗೆ ಕರ್ನಾಟಕ ಸರಕಾರದ ನಿವೃತ್ತ ಅಧಿಕಾರಿಗಳು ಸಹಿ ಮಾಡಿರುವ ಮನವಿಯನ್ನು ಒಪ್ಪಿಸುತ್ತೇನೆ.

Mr Speaker — Petition is presented.

5. Matter Under Rule 334

ವಿಷಯ : ಬೀದರ್ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ಖೋತಾ ಉಂಟಾಗಿ ಬೆಳೆಗೆ ಹಾನಿ ಆಗಿರುವ ಬಗ್ಗೆ.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಈವರೆಗೆ ಸುಮಾರು 20